## ಬೆಳದಿಂಗಳೇ ರಾಜಕುಮಾರನಾಗಿ, ಕರುಣೆ ಜೊತೆಗೂಡಿ...

ಮಹಾಮಾಯೆಯ ಗಮನ ಸೂರ್ಯಾಸ್ತದ ಕಡೆ ಹೊರಳಿ, ರಂಗುರಂಗಿನ ಬಾನನ್ನು ಕಂಡು ಪುಳಕಿತಳಾದಳು. ಒಂದು ಹಂತದ ಸಂಭ್ರಮದ ನಂತರ ಮಗುವನ್ನು ತಾನೇ ಎತ್ತಿಕೊಂಡಿರುವುದಾಗಿ ಹೇಳಿದ ಮೇಲೆ 'ಹುಷಾರು...' ಎಂಬ ಕಾಳಜಿಯ ಎಚ್ಚರಿಕೆಯ ಮಾತಿನೊಂದಿಗೆ ಮತ್ತೆ ನಮ್ಮ ಪ್ರಯಾಣ ಮುಂದುವರೆಯಿತು. ಮಧ್ಯರಾತ್ರಿ ದಾಟಿ ಬೆಳಗಿನ ಮೊದಲ ಜಾವದ ವೇಳೆಗೆ ನಮ್ಮ ಮನೆಗೆ ಬಂದಿಳಿದೆವು. ನನ್ನ ನಾಲ್ವರು ತಮ್ಮಂದಿರಾದ ಧೋತೋಧನ, ಸಕ್ಕೋಧನ, ಶುಕ್ಲೋಧನ ಮತ್ತು ಅಮಿತೋಧನರ ಜತೆ ತಂಗಿಯರಾದ ಅಮಿತಾ ಮತ್ತು ಪಮಿತಾರೂ ಧಾವಂತದಿಂದ ಹಾಗೆ ಹಾಗೇ ಎದ್ದುಬಂದು ತಾಯಿ ಮಗುವನ್ನು ಕಂಡು ಸಂಭ್ರಮಿಸಿದರು. ಅಷ್ಟರಲ್ಲಾಗಲೇ ನಮ್ಮ ಮನೆಯಲ್ಲಿ ನನ್ನ ತಮ್ಮ ಶುಕ್ಲೋಧನನಿಗೆ ಮಹಾನಾಮ ಹೆಸರಿನ ಮಗ ಹುಟ್ಟಿದ್ದರೂ ಹಿರಿಯವನಾದ ನನ್ನ ಮಗನೇ ರಾಜ್ಯದ ಮುಂದಿನ ಉಸ್ತುವಾರಿಯನ್ನು ಹೊರಲು ಹಕ್ಕುಳ್ಳವನಾದ್ದರಿಂದ ಒಂದು ಹೆಜ್ಜೆ ಹೆಚ್ಚೇ ಸಂಭ್ರಮವಿತ್ತು.

ಬೆಳಕು ಹರಿಯುತ್ತಿದ್ದಂತೆಯೇ ನಿನ್ನೆ ದಿನದ ಮತ್ತು ರಾತ್ರಿಯ ಪಯಣದಿಂದ ಬಸವಳಿದಿದ್ದ ನಾನು ಏಳುವ ಮೊದಲೇ ಹಿಂದೆ ಜ್ಯೋತಿಷ್ಯ ಹೇಳಿದ್ದ ಎಲ್ಲ ಎಂಟು ಜನ ಆಸ್ಥಾನ ವಿದ್ವಾಂಸರೂ ಬಂದು ನೆರೆದಿದ್ದರು. ತಾವು ನುಡಿದ ಭವಿಷ್ಯ ಹೇಗೆ ನಿಜವಾಯಿತು ನೋಡಿ, ಗಂಡು ಮಗುವೇ ಹುಟ್ಟಿದೆ ಎಂಬ ಹುಸಿನಗೆ ಅವರ ಮೀಸೆಯಡಿ ಹುದುಗಿದ್ದುದು ಎದ್ದುಕಾಣುವಂತಿತ್ತು. ಮತ್ತೆ ಮಗು ಹುಟ್ಟಿದ ಗಳಿಗೆಯನ್ನು ಕೇಳಿ ಲೆಕ್ಕಾಚಾರ ಹಾಕಿ, ಮಗುವಿನ ಭವಿಷ್ಯ ಅತ್ಯುಜ್ವಲವಾಗಿದೆ ಎಂದರು. ರಾಜನೊಬ್ಬನ ಮಗನ ಭವಿಷ್ಯವನ್ನು ಇನ್ನು ಹೇಗೆ ತಾನೇ ಹೇಳಲು ಸಾಧ್ಯ! ರಾಜನ ಮಗ ರಾಜನಾಗುತ್ತಾನೆ, ಇಲ್ಲವೇ ಉತ್ಪ್ರೇಕ್ಷಿಸಿ ಚಕ್ರವರ್ತಿಯಾಗುತ್ತಾನೆ ಎಂದು ತಾನೇ ಹೇಳಬೇಕು. ಇಲ್ಲದಿದ್ದರೆ ತಲೆದಂಡವಾದೀತೆಂಬ ಭಯವೂ ಇರಬೇಕು. ಅದನ್ನೂ ಮೀರಿ ನಿಸ್ಪೃಹ ಸತ್ಯವನ್ನು ಹೇಳುವ ತಾಕತ್ತು ಈ ಹೊಗಳುಭಟರಿಗೆ ಎಲ್ಲಿದೆ. ಅಷ್ಟಕ್ಕೂ ಈ ಮಗು ಹುಟ್ಟುತ್ತಿದ್ದಂತೆಯೇ ತಾಯಿಯ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿರುವಾಗ ಇದು ಶುಭಸೂಚನೆ ಎಂದು ನಿಮಗೆ ಅನಿಸುತ್ತದೆಯೇ? ಎಂದು ಮರುಪ್ರಶ್ನೆ ಹಾಕಬೇಕೆನಿಸಿದರೂ, ಈ ಅರೆಕಾಸಿನ ಕೂಲಿಯವರ ಮುಂದೆ ಹಾಗೆ ಕೇಳಿ ಏನು ಪ್ರಯೋಜನವೆಂದು ಸುಮ್ಮನಾದೆ. ಅಂಥದೊಂದು ಪ್ರಶ್ನೆಗೆ ನೇರಾನೇರ ಉತ್ತರ ಹೇಳುವಂಥ ತಾಕತ್ತು ಅವತ್ತಿನ ಕಾಲಕ್ಕೆ ಏನಾದರೂ ಇದ್ದಿದ್ದರೆ ಅದು ಅಸಿತ ಮಹರ್ಷಿಗಳಿಗೆ ಮಾತ್ರವಾಗಿತ್ತು.

ಮಹಾಮಾಯೆ ಮೊಲೆಹಾಲನ್ನು ಕುಡಿಸುತ್ತಿದ್ದರೂ ಅದು ಮಗುವಿಗೆ ಸಾಲದೇ ಹಸಿವಿನಿಂದ ಅಳುತ್ತಿತ್ತು. ಹೆಚ್ಚುವರಿ ಹಾಲನ್ನು ಒಳಲೆಯಿಂದ ಹಾಕುತ್ತಿದ್ದರೂ ಅದು ಅಷ್ಟಾಗಿ ರುಚಿಸುತ್ತಿರಲಿಲ್ಲವೆಂದು ಕಾಣುತ್ತದೆ. ಒಂದೆರಡು ದಿನದಲ್ಲೇ ಮಗು ಬಡವಾಗಲಾರಂಭಿಸಿತು. ಅಲ್ಲದೇ ಮಾಯೆಗೆ ನಂಜು ಏರಿ ವಿಪರೀತ ಹೊಟ್ಟೆನೋವಿನಿಂದ ಬಳಲುತ್ತಿದ್ದವಳಿಗೆ ಮೊಲೆಹಾಲು ಉಣಿಸಲು ಸಾಧ್ಯವಾಗುತ್ತಿರಲಿಲ್ಲ. ಎಷ್ಟೋ ಸಲ ಆಕೆ ನಿಶ್ಶಕ್ತಿಯಿಂದ ಬಳಲಿ ಮಲಗಿಬಿಡುತ್ತಿದ್ದಳು. ಇನ್ನೆಷ್ಟೋ ಸಲ ಆಕೆ ಎದ್ದಿದ್ದಾಗ ಮಗು ಮಲಗಿಬಿಟ್ಟಿರುತ್ತಿತ್ತು. ಅದಕ್ಕಾಗಿ ಕೆಲವೊಮ್ಮೆ ಆಕೆ ಎದ್ದಿದ್ದಾಗ ಮೊಲೆಹಾಲು ಹಿಂಡಿಕೊಂಡು ಆಮೇಲೆ ಮಗುವಿಗೆ ಒಳಲೆಯಲ್ಲಿ ಉಣಿಸಲಾಗುತ್ತಿತ್ತು. ನಮ್ಮ ಆಹ್ವಾನದ ಮೇರೆಗೆ ನಿರೀಕ್ಷಿಸಿದಂತೆ ಆಗಮಿಸಿದ ಅಸಿತ ಮಹರ್ಷಿಗಳು, 'ಮಗುವಿನ ಭವಿಷ್ಯ ಅತ್ಯುತ್ಕೃಷ್ಟವಾಗಿದೆ, ಈತನು ಮಹಾಜ್ಞಾನಿಯಾಗಿ ತನ್ನ ಅರಿವಿನ ಬೆಳಕಿನಿಂದ ಇಡೀ ಜಗತ್ತಿನ ಕತ್ತಲೆಯನ್ನು ತೊಳೆಯುತ್ತಾನೆ' ಎಂದು ಹೇಳಿದವರು, ಆತನ ಭವಿಷ್ಯ ಎರಡು ಕವಲುಗಳಲ್ಲಿದ್ದು ಯಾವ ದಾರಿಯಲ್ಲಿ ಹೋದರೂ ಅಪರಿಮಿತ ತೇಜೋಪುಂಜನಾಗಿ ನಕ್ಷತ್ರದೆತ್ತರಕ್ಕೆ ಏರುತ್ತಾನೆ ಎಂದು ಹೇಳಿ, ಮಗುವಿನ ಕಾಲಿಗೆ ತಮ್ಮ ತಲೆಯನ್ನು ಪೊಡಮಡಿದಿದ್ದರು. ಅವರ ನುಡಿಯಿಂದ ಅಭಿಮಾನ ಉಂಟಾದರೂ ಅಸ್ವಸ್ಥಳಾಗಿರುವ ಮಾಯೆಯನ್ನು ಆಶೀರ್ವದಿಸಿರೆಂದು ಕೇಳಿದಾಗಲೇಕೋ ಅವರು ಅಷ್ಟಾಗಿ ಸ್ಪಂದಿಸಲಿಲ್ಲ. ಕೇಳಿದರೂ ಕೇಳಿಸದಂತೆ ನಟಿಸಿದರು. ಮಗುವಿಗೆ ಜನ್ಮ ನೀಡುವುದಷ್ಟೇ ನಿನ್ನ ಕರ್ತವ್ಯವಾಗಿತ್ತು ಎಂದು ಇದರ ಅರ್ಥವೇ?

ಅಷ್ಟಕ್ಕೂ ತನ್ನ ಹೆರಿಗೆ ಈ ಮನೆಯಲ್ಲೂ ಬೇಡ, ದೇವದಹದ ಮನೆಯಲ್ಲೂ ಬೇಡ ಎಂದು ಲುಂಬಿನಿಯ ಉದ್ಯಾನವನದಲ್ಲಿ ಮಗು ಜನಿಸಿದ್ದು ದೈವನಿಯಾಮಕವಾಗಿತ್ತೇ? ಮಾಯೆಯ ಬೇಡಿಕೆಯ ಅನುಸಾರ

